

# ನಯವಂಚಕ ಹಾವು

ಕಾಡಿನಂಚಿನಲ್ಲಿ ವಿಶಾಲ ಕೆರೆಯೊಂದಿತ್ತು. ಬೇಸಿಗೆಯಲ್ಲಿ ಒಣಗಿದ್ದ ಕೆರೆ ಮಳೆ ಬಂದೊಡನೆ ತುಂಬತೊಡಗಿತು. ಇದರಿಂದ ಅಂಚಿನ ನೀರಿನ ಮೂಲಗಳಲ್ಲಿ ವಾಸವಿದ್ದ ನೂರಾರು ಕಪ್ಪೆಗಳೆಲ್ಲ ಅಲ್ಲಿ ಬಂದು ನೆಲೆಸತೊಡಗಿದವು. ನೀರಿನಲ್ಲಿ ತೇಲುತ್ತಾ ಕೆರೆಯ ದಡದ ಅಂಚಿನ ಪೊಟರೆಗಳಲ್ಲಿ ನಿದ್ರಿಸುತ್ತಾ ಕಾಲ ಕಳೆಯುತ್ತಿದ್ದವು. ಇನ್ನು ನಮ್ಮ ಜೀವಕ್ಕೆ ಯಾವುದೇ ಅಪಾಯವಿಲ್ಲ. ಈ ಕೆರೆಯ ನೀರು ಬತ್ತುವವರೆಗೂ ಬೇರೆ ಚಿಂತೆಯಿಲ್ಲ. ಉತ್ತಮ ಮಳೆಯೂ ಆಗುತ್ತಿರುವುದರಿಂದ ಯಾವುದೇ ತೊಂದರೆಯಾಗುವುದಿಲ್ಲ ಎಂದು ಪರಸ್ಪರ ಆಡಿಕೊಳ್ಳುತ್ತಿದ್ದವು.

ಹೀಗೆ ದಿನಕಳೆಯುತ್ತಿದ್ದಂತೆ ಅದೇ ಕೆರೆಗೆ ಹಾವೊಂದು ಬಂದು ಸೇರಿಕೊಂಡಿತು. ನೀರಿನಲ್ಲಿ ಈಜಾಡುತ್ತಾ, ಕೆರೆಯ ದಡದಲ್ಲಿ ವಿಶ್ರಾಂತಿ ಪಡೆಯುತ್ತಿತ್ತು. ಕ್ರಮೇಣ ಕಪ್ಪೆಗಳೊಂದಿಗೆ ಸ್ನೇಹ ಬೆಳೆಸತೊಡಗಿತು. ಆದರೆ ಕಪ್ಪೆಗಳಿಗೆ ಹಾವಿನ ಬಗ್ಗೆ ನಂಬಿಕೆ ಬರಲಿಲ್ಲ.

'ನಾನು ಇಷ್ಟೊಂದು ಸ್ನೇಹ ಬೆಳೆಸಲು ಪ್ರಯತ್ನಿಸಿದರೂ ಯಾಕೆ ನನ್ನನ್ನು ನಿಮ್ಮೊಂದಿಗೆ ಸೇರಿಸಿಕೊಳ್ಳುತ್ತಿಲ್ಲ' ಎಂದು ಹಾವು ನಯವಾಗಿ ಪ್ರಶ್ನಿಸಿತು.

'ನಾವೆಲ್ಲ ಬೇರೆ ಕೆರೆಯಲ್ಲಿ ಇರುವಾಗ ಅಲ್ಲಿದ್ದ ಹಾವು ನಮ್ಮ ಸಂತತಿಯನ್ನು ತಿಂದು ಮೋಸ ಮಾಡಿತ್ತು. ಹಾಗಾಗಿ ನಿನ್ನ ಮೇಲೆ ನಮಗೆಲ್ಲ ನಂಬಿಕೆಯಿಲ್ಲ. ನೀನು ಈ ಕೆರೆಯಲ್ಲಿ ಇರುವುದಾದರೆ ನಾವೆಲ್ಲ ಇಲ್ಲಿಂದ ಜಾಗ ಖಾಲಿ ಮಾಡುತ್ತೇವೆ. ಇಲ್ಲವಾದರೆ ನೀನೇ ಇಲ್ಲಿಂದ ತೆರಳು' ಎಂದು ಕಪ್ಪೆಗಳೆಲ್ಲ ಹೇಳಿಬಿಟ್ಟವು.

'ನಾನು ಎಂದಿಗೂ ಕಪ್ಪೆಗಳನ್ನು ಆಹಾರವಾಗಿ ಸ್ವೀಕರಿಸಿದವನಲ್ಲ. ನನಗೆ ಅದನ್ನು ತಿಂದರೆ ಜೀರ್ಣವಾಗುವುದೂ ಇಲ್ಲ. ಸಣ್ಣಪುಟ್ಟ ಹುಳ, ಇಲಿಗಳನ್ನು ತಿಂದು ಬದುಕುತ್ತಿದ್ದೇನೆ. ನನಗೆ ಕಪ್ಪೆಗಳನ್ನು ತಿನ್ನುವ ಹಾವುಗಳನ್ನು ಕಂಡರೂ ಆಗದು. ಹಾಗಾಗಿ ಅಂತಹ ಹಾವುಗಳ ಸಹವಾಸ ಮಾಡದೇ ನಾನೊಬ್ಬನೇ ಬದುಕುತ್ತಿದ್ದೇನೆ. ನನ್ನ ಬದುಕಿಗೆ ಯಾವ ಜತೆಗಾರರೂ ಇಲ್ಲ. ಹಲವು ವರ್ಷಗಳಿಂದ ಒಂಟಿಯಾಗಿ ಬದುಕುತ್ತಿದ್ದೇನೆ. ಕೆಟ್ಟ ಸ್ನೇಹಿತರೆಂದರೆ ನನಗಾಗುವುದೇ ಇಲ್ಲ. ಒಳ್ಳೆಯ ಗುಣದ ನಿಮ್ಮನ್ನು ಸ್ನೇಹಿತರನ್ನಾಗಿಸಿಕೊಳ್ಳಲು ಬಯಸಿದ್ದೇನೆ. ನೀವು ನನ್ನನ್ನು ಒಪ್ಪದಿದ್ದರೆ ನನಗೆ ಬೇರೆ ಯಾರೂ ದಿಕ್ಕಿಲ್ಲ' ಎಂದು ಹೇಳುತ್ತಾ ಅಳತೊಡಗಿತು.

ಇದನ್ನು ಕೇಳಿ ಕೆಲವು ಕಪ್ಪೆಗಳು ಹಾವಿನ ಸ್ನೇಹ ಬೆಳೆಸುವುದಕ್ಕೆ ಮುಂದಾದವು. ಆದರೆ ಇನ್ನು ಕೆಲವು ಕಪ್ಪೆಗಳು ವಿರೋಧ ವ್ಯಕ್ತಪಡಿಸಿದವು. ಕಪ್ಪೆಗಳಲ್ಲಿಯೇ ಇದಕ್ಕೆ ಪರ–ವಿರೋಧ ವ್ಯಕ್ತವಾಯಿತು. ಹಾವಿನ ಸ್ನೇಹ ಬೆಳೆಸುವುದಕ್ಕೆ ಒಪ್ಪದ ಕಪ್ಪೆಗಳು ಕೆರೆಯಿಂದ ಜಾಗ ಖಾಲಿ ಮಾಡಿದವು. ಕೆರೆಯಲ್ಲಿ ಉಳಿದ ಕಪ್ಪೆಗಳು ಹಾಗೂ ಹಾವು ಸ್ನೇಹಿತರಾಗಿ ಬಾಳತೊಡಗಿದವು.

ಹೀಗೆ ದಿನ ಕಳೆದಂತೆ ಹಾವಿಗೆ ಆಹಾರದ ಕೊರತೆಯಾಗತೊಡಗಿತು. ಅದಕ್ಕೆ ಏನು ಮಾಡಬೇಕು ಎಂದು ತೋಚಲಿಲ್ಲ. ಕಪ್ಪೆಗಳನ್ನೇ ತಿನ್ನುವುದಕ್ಕೆ ಯೋಚಿಸಿತು. ಆದರೆ ಒಂದೊಂದೆ ಕಪ್ಪೆಗಳನ್ನು ಹಿಡಿಯತೊಡಗಿದರೆ ಇನ್ನುಳಿದವು ಇಲ್ಲಿಂದ ಓಡಿ ಹೋಗುತ್ತವೆ. ಇದಕ್ಕೆ ಉಪಾಯ ಮಾಡಬೇಕು ಎಂದುಕೊಂಡಿತು.

ಅವುಗಳನ್ನೆಲ್ಲ ಕರೆದು 'ನೀವೆಲ್ಲ ಪ್ರತ್ಯೇಕ ಪೊಟರೆಯಲ್ಲಿ ವಾಸಿಸುವುದರಿಂದ ಬೇರೆ ಕಡೆಗಳಿಂದ ಬರುವ ಹಾವುಗಳಿಂದ ನಿಮಗೆ ಅಪಾಯವಾಗುತ್ತದೆ. ದೊಡ್ಡದಾದ ಪೊಟರೆಯಲ್ಲಿ ಎಲ್ಲರೂ ಒಟ್ಟಿಗೆ ವಾಸಿಸಿ. ನಿಮ್ಮ ರಕ್ಷಣೆಗೆಂದು ಅಲ್ಲೆ ಪಕ್ಕದ ಪೊಟರೆಯಲ್ಲಿ ನಾನು ಇರುತ್ತೇನೆ' ಎಂದು ಅವರಿಗೆ ಸಲಹೆ ನೀಡಿತು. ಅವೆಲ್ಲ ಹಾವಿನ ಮಾತನ್ನು ನಂಬಿ ದೊಡ್ಡ ಪೊಟರೆಯನ್ನು ಗೂಡನ್ನಾಗಿ ಮಾಡಿಕೊಂಡವು. ಹಾವು ಅಲ್ಲೆ ಸನಿಹದಲ್ಲಿ ಉಳಿಯತೊಡಗಿತು. ದಿನ ಕಳೆದಂತೆ ಹಾವಿಗೆ ಹಸಿವಿನ ಸಂಕಟ ಹೆಚ್ಚತೊಡಗಿತು. ಅದು ಏಕಾಏಕಿ ಕಪ್ಪೆಗಳಿರುವ ಪೊಟರೆಗೆ ನುಗ್ಗಿತು. ಅವನ್ನೆಲ್ಲ ಅಲ್ಲೆ ಅಡ್ಡಗಟ್ಟಿತು, ಹೊರಬೀಳದಂತೆ ನೋಡಿಕೊಂಡಿತು. ಆಗ ಕಪ್ಪೆಗಳಿಗೆ ಹಾವಿನ ಮೋಸ ಅರಿವಿಗೆ ಬಂದಿತು. ಸ್ನೇಹಿತರೆಲ್ಲ ಹೇಳಿದರೂ ಹಾವಿನ ಸ್ನೇಹ ಮಾಡಿದ್ದಕ್ಕೆ ತಮ್ಮಷ್ಟಕ್ಕೆ ಪಶ್ಚಾತಾಪಪಟ್ಟವು. ಹಾವು ತನಗೆ ಬೇಕಾದಷ್ಟು ಕಪ್ಪೆಗಳನ್ನು ಹಿಡಿದು ನುಂಗಿತು. ಉಳಿದವುಗಳನ್ನು ಸಾಯಿಸಿತು. ಹತ್ತಾರು ದಿನಗಳ ಕಾಲ ಅವುಗಳನ್ನೆ ತಿಂದು ತೇಗಿತು.

**–ಆಶಾ ಕೆರೆಗದ್ದೆ**